ಅದನ್ನು ತೆಗೆದುಕೊಂಡು ಹೋಗಿ ಪಕ್ಕದಲ್ಲಿರುವ ಮಾವಿನಮರದ ಬುಡದಲ್ಲಿ ಹೂಳು' ಎಂದಳು. ತಮ್ಮ ಹಾಗೆಯೇ ಮಾಡಿದ. ಮರುದಿನ ನೋಡಿದಾಗ ಮರದ ಕೊಂಬೆಗಳ ತುಂಬ ಚಿನ್ನದ ಹಣ್ಣುಗಳು ಜೋತಾಡುತ್ತಿದ್ದವು. ಅಕ್ಕ ಕೊಯ್ಯಲು ಹೋದರೆ ಮರದ ಕೊಂಬೆ ಆಕಾಶಕ್ಕೇರುತ್ತಿತ್ತು. ತಮ್ಮ ಸನಿಹ ಬಂದರೆ ನೆಲದವರೆಗೂ ಬಾಗುತ್ತಿತ್ತು. ಇದನ್ನು ನೋಡಿ ಅಕ್ಕ ತನಗೂ ಎರಡು ಹಣ್ಣು ಕೊಡಲು ಅವನೊಂದಿಗೆ ಕೇಳಿದಳು. ಆಗ ಹಣ್ಣು ಮನುಷ್ಯರಂತೆ ಮಾತನಾಡುತ್ತ, 'ನಿನಗೆ ಕೊಡಲು ಬಿಡುವುದಿಲ್ಲ. ಆಮೆಯಾಗಿರುವಾಗ ನೀನು ನನ್ನನ್ನು ಕೊಂದರೇನಾಯಿತು, ಹಣ್ಣುಗಳ ಒಳಗೆ ನಾನಿದ್ದೇನೆ' ಎಂದು ಹೇಳಿತು.

ತನ್ನ ತಂಗಿ ಹಣ್ಣಿನೊಳಗೆ ಇದ್ದಾಳೆಂದು ತಿಳಿದಾಗ ಅಕ್ಕ ಗಂಡನನ್ನು ಕರೆದಳು. 'ಮತ್ತೆ ಹೊಟ್ಟೆನೋವು ಉಲ್ಬಣಿಸಿದೆ. ನಾನು ಬದುಕಬೇಕಿದ್ದರೆ ಆ ಮಾವಿನಮರದ ಬುಡಕ್ಕೆ ಬೆಂಕಿ ಹಚ್ಚಿ' ಎಂದಳು. ಹೆಂಡತಿಗಾಗಿ ಅವನು ಈ ಕೆಲಸವನ್ನು ಮಾಡಿದ. ತಮ್ಮ ಬೆಳಗ್ಗೆ ಎದ್ದು ನೋಡಿದಾಗ ಮಾವಿನ ಮರ ಭಸ್ಮವಾಗಿತ್ತು. ಜೀವ ಕಳೆದುಕೊಳ್ಳುತ್ತೇನೆ ಎಂದು ನಿರ್ಧರಿಸಿ ಊರಿನಲ್ಲಿದ್ದ ದೊಡ್ಡ ಕೊಳದ ಬಳಿಗೆ ತೆರಳಿದ. ಆ ಕೊಳದಲ್ಲಿ ಹಲವಾರು ಬಣ್ಣದ ತಾವರೆ ಹೂಗಳು ಅರಳಿದ್ದವು. ಆ ದೇಶದ ರಾಜನಿಗೆ ಒಬ್ಬಳೇ ಮಗಳಿದ್ದಳು. ಒಂದು ಸಲ ಅವಳು ಉದ್ಯಾನವನದಲ್ಲಿ ವಿಹರಿಸುತ್ತಿದ್ದಾಗ ಇದ್ದಕ್ಕಿದ್ದಂತೆ ಕಾಣೆಯಾದಳು. ರಾಜನು ದೈವಜ್ಞರ ಮೊರೆ ಹೊಕ್ಕ. ಅವರು, 'ನಿನ್ನ ಮಗಳ ಸೌಂದರ್ಯ ಕಂಡು ಮತ್ಸರ ಹೊಂದಿದ ಯಕ್ಷಿಣಿಯೊಬ್ಬಳು ಅವಳನ್ನು ನೀಲಿ ವರ್ಣದ ತಾವರೆ ಹೂವನ್ನಾಗಿ ಪರಿವರ್ತಿಸಿ ಇದೇ ಊರಿನ ಕೊಳದಲ್ಲಿರಿಸಿದ್ದಾಳೆ. ಯಾರು ಅವಳ ಗಂಡನಾಗುತ್ತಾನೋ ಅವನು ಕರೆದರೆ ಮಾತ್ರ ಆ ಹೂವು ತಾನಾಗಿ ಬಳಿಗೆ ಬರುತ್ತದೆ. ಅವನು ಮುಟ್ಟಿದ ತಕ್ಷಣ ಹೆಣ್ಣಾಗಿ ಬದಲಾಗುತ್ತದೆ. ಹೀಗಾಗಿ ಯಾವ ಯುವಕನನ್ನು ಕಂಡರೂ ಕೊಳದ ಬಳಿಗೆ ಕರೆದುಕೊಂಡು ಹೋಗಿ ಹೂವನ್ನು ಕರೆಯಲು ಹೇಳು' ಎಂದು ತಿಳಿಸಿದರು.

ತಮ್ಮನು ಕೊಳವನ್ನು ತಲುಪುವಾಗ ರಾಜನು ಎಲ್ಲ ಯುವಕರನ್ನೂ ಕೊಳದ ಬಳಿಗೆ ಕರೆತಂದು ಹೂವನ್ನು ಕರೆಯಲು ಹೇಳಿದ್ದ. ಆದರೆ ಯಾರು ಕರೆದರೂ ಹೂವು ಸನಿಹ ಬಂದಿರಲಿಲ್ಲ. ರಾಜನು ತಮ್ಮನೊಂದಿಗೂ ಇದನ್ನು ಹೇಳಿದಾಗ ತಮ್ಮ ಕರೆದ ಕೂಡಲೇ ನೀಲಿ ಮತ್ತು ಕೆಂಪುಬಣ್ಣದ ಎರಡು ತಾವರೆಗಳು ಓಡೋಡಿ ಬಂದವು. ಕೈಯಲ್ಲಿ ಅವನು ಮುಟ್ಟಿದಾಗ ನೀಲಿ ತಾವರೆ ರಾಜಕುಮಾರಿಯಾಯಿತು. ಕೆಂಪು ತಾವರೆ ಅವನು ಕೈಹಿಡಿಯಬೇಕಾಗಿದ್ದ ಹುಡುಗಿಯಾಯಿತು.

ರಾಜನು ತನ್ನ ಮಗಳನ್ನು ವಿವಾಹವಾಗಲು ಹೇಳಿದಾಗ ತಮ್ಮನು ತಾನು ಪ್ರೀತಿಸಿದವಳನ್ನೇ ಮದುವೆಯಾಗುವುದಾಗಿ ಹೇಳಿದ. ತಂಗಿಯು ರಾಜಕುಮಾರಿಯನ್ನೂ ಮದುವೆಯಾಗಿ ತಮ್ಮಿಬ್ಬರನ್ನೂ ಅನ್ಯೋನ್ಯವಾಗಿ ನೋಡಿಕೊಳ್ಳುವಂತೆ ಹೇಳಿದಳು. ತಮ್ಮನು ಅವರನ್ನು ವರಿಸಿ ಅರಮನೆಯಲ್ಲಿ ಸುಖವಾಗಿದ್ದ. ■

# ಮಳೆ ಮಳೆ ಜಡಿ ಮಳೆ

■ **ಮಹೇಶ್ವರ ಹುರುಕಡ್ಲಿ**

ಕಲೆ: ಸಂತೋಷ್ ಸಸಿಹಿತ್ಲು



ಮಳೆಯೇ ಮಳೆಯೇ
ಜಿಟಿ ಜಿಟಿ ಮಳೆಯೇ
ಶಾಲೆಗೆ ಹೋಗುವ
ಸಮಯದಿ ರಭಸದಿ ಸುರಿಯೇ

ಮರವೇ ಮರವೇ
ಮಾವಿನ ಮರವೇ
ಶಾಲೆಗೆ ಹೋಗುವ
ಸಮಯದಿ ಹಣ್ಣನು ಸುರಿಯೇ

ಗಾಳಿಯೇ ಗಾಳಿಯೇ
ಬೀಸುವ ಗಾಳಿಯೇ
ಶಾಲೆಗೆ ಹೋಗುವ
ಸಮಯದೀ ಬಿರುಗಾಳಿ ಸರಿಯೇ?

ಚಿಟಪಟ ಸುರಿವ ಮಳೆಗೆ
ಸುಯ್ಯನೇ ಬೀಸುವ ಗಾಳಿಗೆ
ಮರದಿಂದುದುರುವ ಹಣ್ಣಿಗೆ

ಹುಚ್ಚೇಳುವುದು ಎಮ್ಮನ
ಶಾಲೆ ಪುಸ್ತಕ ಕೊಡೆಗಳೆಲ್ಲಾ
ಆಗಿವೆ ನೆಪಮಾತ್ರ
ಎಲ್ಲರ ಎಲ್ಲದರ ಮೇಲೂ ಸಮನಾಗಿ
ಸುರಿವ ಮಳೆಗಿಲ್ಲ ಕುಲಗೋತ್ರ ■

## ಕುಂಚ ಪ್ರಪಂಚ





**ಧನ್ಯತಾ ಎಲ್.**
8ನೇ ತರಗತಿ,
ಟೆರೇಷಿಯನ್
ಪ್ರೌಢಶಾಲೆ, ಮೈಸೂರು

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in